ಸುರಪುರದ ಸರ್ಕಾರಿ ಆಸ್ಪತ್ರೆಯಲ್ಲಿ–ಕ್ಷ–ಕಿರಣ ಉಪಕರಣದ ಬಗ್ಗೆ

೧೦೧೫. ಶ್ರೀ ಮದನಗೋಪಾಲ (ಸುರಪುರ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸುರಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಕ್ಷ–ಕಿರಣ ಉಪಕರಣವನ್ನು ಅಳವಡಿಸಿರುವುದು ನಿಜವೆ : ಹಾಗಿದ್ದಲ್ಲಿ ಯಾವ ವರ್ಷದಲ್ಲಿ ಅಳವಡಿಸಲಾಯಿತು ?

ಆ) ಪ್ರಾರಂಭವಾದಂದಿನಿಂದ ಇಲ್ಲಿಯವರೆಗೆ ಸದರಿ ಉಪಕರಣವನ್ನು ಕಳಿಸಿರುವ ರಾಸಾಯನಿಕ ದ್ರವಗಳು (ಕೆಮಿಕಲ್ಸ್) ಮತ್ತು ಫಿಲಂಗಳು ಎಷ್ಟು : ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಇ) ಕ್ಷ–ಕಿರಣ ತಂತ್ರಜ್ಞರು ಇರುವರೆ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ದಿನಾಂಕ ೩೧–೩–೧೯೭೭ರಂದು ಕ್ಷ–ಕಿರಣ ಉಪಕರಣವನ್ನು ಅಳವಡಿಸಲಾಗಿದೆ.

ಆ) ಈ ಕೆಳಕಂಡಂತೆ ಪೊತ್ತದ ರಾಸಾಯನಿಕ ದ್ರವ ಮತ್ತು ಫಿಲಂಗಳನ್ನು ಒದಗಿಸಲಾಗಿದೆ.

ದಿನಾಂಕ	ರೂ.
೨೮–೧೧–೧೯೮೦	೫೦೦
೧೯–೧೨–೧೯೮೦	೪೦೦
೧೭–೨–೧೯೮೧	೭೫೦
೪–೫–೧೯೮೪	೨೬೩

ಇ) ಅಲ್ಲಿದ್ದ ಕ್ಷ–ಕಿರಣ ತಂತ್ರಜ್ಞರನ್ನು ದಿನಾಂಕ ೨೫–೪–೧೯೮೪ರಂದು ಸಾಮಾನ್ಯ ವರ್ಗಾವಣೆಯಲ್ಲಿ ವರ್ಗಾಯಿಸಿ, ಅವರ ಸ್ಥಳಕ್ಕೆ ಬೇರೆಯವರೊಬ್ಬರನ್ನು ವರ್ಗಾಯಿಸಿದೆ.

ಸುರಪುರ ದಂತ ಚಿಕಿತ್ಸಾಲಯದ ಬಗ್ಗೆ

೨೧೯೨. ಶ್ರೀ ಮದನಗೋಪಾಲ ನಾಯಕ್ (ಸುರಪುರ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸುರಪುರ ಪಟ್ಟಣದಲ್ಲಿ ದಂತ ಚಿಕಿತ್ಸಾಲಯ ಇರುವುದು ನಿಜವೇ ? ಹಾಗಿದ್ದಲ್ಲಿ ಯಾವಾಗ ಪ್ರಾರಂಭವಾಯಿತು ?

ಆ) ಸದರಿ ದವಾಖಾನೆಗೆ ಇಲ್ಲಿಯವರೆಗೆ ಬಂದಿರುವ ವೈದ್ಯರುಗಳ ಸಂಖ್ಯೆ ಎಷ್ಟು ?

ಇ) ಹಾಲಿ ಈ ಆಸ್ಪತ್ರೆಯಲ್ಲಿ ವೈದ್ಯರು ಇರುವರೆ ? ಹಾಗಿದ್ದಲ್ಲಿ ವೈದ್ಯರನ್ನು ನೇಮಿಸಲು ಸರ್ಕಾರಕ್ಕೆ ಕೈಗೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—

ಅ) ನಿಜ. ೧೯೭೬ಕ್ಕೂ ಮುಂಚಿನಿಂದ ಇದೆ.

ಆ) ೨ ದಂತ ವೈದ್ಯರು.

ಇ) ಇಲ್ಲ. ಇಷ್ಟರಲ್ಲೇ ಭರ್ತಿ ಮಾಡಲಾಗುವುದು.